16

# ಇನ್ನು "ಸ್ವಲ್ಪ ಕಾಲದಲ್ಲಿ"

## (ಯೋಹಾನ 16)

*"ಸ್ವಲ್ಪ ಕಾಲವಾದ ಮೇಲೆ ನಾನು ನಿಮಗೆ ಕಾಣುವದಿಲ್ಲ; ಅನಂತರ ಸ್ವಲ್ಪಕಾಲವಾದ ಮೇಲೆ ನನ್ನನ್ನು ನೋಡುವಿರಿ ಅಂದನು. ಇದನ್ನು ಕೇಳಿ ಆತನ ಶಿಷ್ಯರಲ್ಲಿ ಕೆಲವರು - ಇದೇನು ಈತನು ಹೇಳುವ ಮಾತು? ಸ್ವಲ್ಪ ಕಾಲವಾದ ಮೇಲೆ ನಾನು ನಿಮಗೆ ಕಾಣುವದಿಲ್ಲ, ಅನಂತರ ಸ್ವಲ್ಪಕಾಲವಾದ ಮೇಲೆ ನನ್ನನ್ನು ನೋಡುವಿರಿ ಅನ್ನುತ್ತಾನೆ; ... ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನೀವು ತಂದೆಯನ್ನು ಏನಾದರು ಬೇಡಿಕೊಂಡರೆ ಅದನ್ನು ಆತನು ನ್ನ ಹೆಸರಿನ ಮೇಲೆ ನಿಮಗೆ ಕೊಡುವನು. ನೀವು ಇದುವರೆಗೆ ನನ್ನ ಹೆಸರಿನ ಮೇಲೆ ಯಾವದೊಂದನ್ನೂ ಬೇಡಿಕೊಂಡಿಲ್ಲ; ಬೇಡಿಕೊಳ್ಳಿರಿ, ನಿಮಗೆ ಸಿಕ್ಕುವದು; ಆಗ ನಿಮ್ಮ ಆನಂದವು ಪರಿಪೂರ್ಣವಾಗುವದು" (ವಚನಗಳು 16-24)*

ಅಪೊಸ್ತಲರು ಮುಂದೆ ಎದುರಿಸಲಿದ್ದ ಸಂಗತಿಗಳ ಕುರಿತು ಯೇಸು ಚರ್ಚಿಸಿ ಅವರನ್ನು ಸಿದ್ಧಪಡಿಸಿದನು, ಅದರ ಸಾರಾಂಶವನ್ನು ಯೋಹಾನನ ಸುವಾರ್ತೆಯಲ್ಲಿ ತಿಳಿಸಲಾಗಿದೆ (ಅಧ್ಯಾಯ 13-16). ಯೇಸುವಿನ ಕ್ರೂಜೆಯ ಮರಣದ ವಿಚಾರವು ಅಪೊಸ್ತಲರಲ್ಲಿ ಆಘಾತವನ್ನು ಉಂಟುಮಾಡಿದಾಗ, ಯೇಸು ಅವರನ್ನು ಸಂತೈಸಿ, ತನ್ನ ಆತ್ಮನಿಂದ ಅವರನ್ನು ಭಲಪಡಿಸಿದನು, ಹಾಗೂ ಅವರ ಭವಿಷ್ಯದ ಯೋಜನೆಗಳನ್ನು ಹಾಗೂ ದೈವೀಕ ಸಂತೈಸುವಿಕೆಯನ್ನು ನೀಡಿದನು. ಈ ಉತ್ತೇಜನವನ್ನು ನೀಡುವದರ ಮೂಲಕ (16:16-24), ಯೇಸು ಅವರನ್ನು ಭಲದಿಂದ ತುಂಬಿದನು - ಇದರಿಂದ ಅವರು ಮುಂದಿನ ಅನಿಶ್ಚಯವಾದ ಭವಿಷ್ಯಕ್ಕೆ ಸಿದ್ಧರಾದರು.

"ಇನ್ನು ಸ್ವಲ ಕಾಲ" ಎಂಬ ವ್ಯಾಖ್ಯಾನದಲ್ಲಿ ಯೇಸುವಿನ ಪ್ರಮುಖವಾದ ಆಲೋಚನೆಯ ಒಳಗೊಂಡಿರುತ್ತದೆ, ಒಂಭತ್ತು ವಚನಗಳಲ್ಲಿ, ಏಳುಸಾರಿ ಈ ವ್ಯಾಖ್ಯಾನವನ್ನು ತಿಳಿಸಲಾಗಿದೆ. ಲೋಕದಲ್ಲಿನ ಯೇಸುವಿನ ಸೇವೆಯು ಅಂತ್ಯಗೊಳ್ಳುತ್ತಾ ಇರಲಾಗಿ, ಆತನು ಲೋಕದ ರಕ್ಷಣಾ ಕಾರ್ಯವನ್ನು ಕಾರ್ಯರೂಪಕ್ಕೆ ತರುವದಕ್ಕಿದ್ದನು. ಸಮಯವು ಯಾರಿಗೂ ಕಾಯಲಾರದು, ಪ್ರತಿಯೊಬ್ಬನು ಸಹ ತನಗೆ ದೊರಕಿರುವ ಸ್ವಲ್ಪ ಸಮಯವನ್ನು ಸದುಪಯೋಗ ಮಾಡಿಕೊಳ್ಳಬೇಕು ಸ್ನಾನಿಕನಾದ ಯೋಹಾನನು ಒಂದೂವರೆ ವರ್ಷಗಳಲ್ಲಿ, ದೇವರು ಅವನಿಗೆ ನೇಮಿಸಿದ ಕೆಲಸವನ್ನು ತೀರಿಸಿದನು, ಯೇಸು ತನ್ನ ಕೆಲಸವನ್ನು ಪೂರ್ಣಮಾಡಲು $3\frac{1}{2}$ ವರ್ಷಗಳ ಅವಧಿಯ ಆತನಿಗೆ ಮೀಸಲಾಗಿತ್ತು. ನಿಶ್ಚಯವಾಗಿಯೂ, ಈ ಗುರುವಾರ ರಾತ್ರಿಯಲ್ಲಿ ಮನುಷ್ಯ ಕುಮಾರನು ತಾನು ಸಾಧಿಸಬೇಕಾದ ಸಮಯವು ಸಮೀಪವಾಯಿತು ಎಂದು ತಿಳಿದನು. ಆ ಅಂತ್ಯವನ್ನು ಅಪೊಸ್ತಲರು ಎದುರಿಸಲು ಸಿದ್ಧರಾಗಬೇಕಿತ್ತು.

"ಸ್ವಲ್ಪಕಾಲ" ಎಂಬದರಲ್ಲಿ, ಯೇಸು ಯಾವ ಅರ್ಥವನ್ನು ತಿಳಿಸಿರುವನು 16:16-62? ಯೇಸು ಲೋಕದವರಿಗೆ ನೀಡಿದ ಸಂಗತಿಯು ಇದರಲ್ಲಿ ಅಡಕವಾಗಿತು.

### ಪೂರ್ಣವಾದ ರಕ್ಷಣೆ

*"ಸ್ವಲ್ಪಕಾಲ" ಎಂಬುದರಲ್ಲಿ ರಕ್ಷಣೆಯು ಪೂರ್ಣವಾಯಿತು ಎಂಬ ಅಂಶವಿದೆ* (16:16) ಸ್ವಲ್ಪ ಕಾಲವಾದ ಮೇಲೆ ನಾನು ನಿಮಗೆ ಕಾಣುವದಿಲ್ಲ - ಆತನು ಲೋಕದಿಂದ ಹೊರಟು

ಹೋಗುತ್ತಿದ್ದನು - ಧೈಹೀಕವಾದ ಸಾನಿಧ್ಯವನ್ನು ತೊರೆದು ಹೋಗುತ್ತಿದ್ದನು - ತಾನು ತನ್ನ ಕಾರ್ಯವನ್ನು ಸಾಧಿಸಿದ್ದನು. ರಕ್ಷಣಾ ಕಾರ್ಯವು ಪೂರ್ಣವಾಗಿ, ತಂದೆಯು ಆತನನ್ನು ಕಳುಹಿಸಿದ ಉದ್ದೇಶವು ಕಾರ್ಯಸಾಧನೆ ಮಾಡಿತು.

ತಕ್ಷಣವೇ ಒಂದು ವಿಶಿಷ್ಟವಾದ ಸಂಗತಿಯು ಜರುಗುವದಕ್ಕಿತ್ತು. ಆದ್ದರಿಂದ ಆತನು ಇನ್ನು ಸ್ವಲ್ಪ ಕಾಲ ಎಂದು ಹೇಳಿದ್ದನು. ಅಂದರೆ ಕೆಲವು ಗಳಿಗೆ ಮಾತ್ರ ಇತ್ತು. ಆತನನ್ನು ಹಿಡಿಯುವವರು ಆತನ ಸಮೀಪಕ್ಕೆ ಬರುತ್ತಿದ್ದರು, ಆತನನ್ನು ವಿಚಾರಣೆ ಮಾಡಿ ಶಿಲುಬೆಗೆ ಹಾಕುವವರಿದ್ದರು. ಮರಣದ ನಂತರ ಆತನು ಸಮಾಧಿಯಲ್ಲಿ ಮೂರು ದಿನಗಳ ಕಾಲ ಇದ್ದುವ ಪುನರುತ್ಥಾನ ಹೊಂದಿ ಮುಂದಿನ ನಾಲ್ವತ್ತು ದಿವಸಗಳ ಕಾಲ ತಾನು ಜೀವಿಸುತ್ತಿರುವನು ಎಂದು ಸಾಭೀತುಪಡಿಸಿದನು. ನಂತರ ಆತನು ತಂದೆಯ ಬಳಿಗೆ ಏರಿಹೋಗುತ್ತಿದ್ದನು. ಈ ಗುರುತರವಾದ ವಿಚಾರವನ್ನು ಈ ಲೋಕದಲ್ಲಿ ಗ್ರಹಿಸುವವರು ಯಾರು ಇರಲಿಲ್ಲ, ಯೇಸು ಬೇಗನೆ ಮನುಷ್ಯರ ರಕ್ಷಣಾ ಕಾರ್ಯವನ್ನು ಪೂರೈಸಿ, ತಂದೆಯ ಬಲಪಾರ್ಶ್ವದಲ್ಲಿ ಕುಳಿತು ಸಭೆಗೆ ಶಿರಸ್ಸಾಗಿ ಆಡಳಿತ ಮಾಡುವವನಿದ್ದನು.

ಸಭೆಯನ್ನು ಕೊಂಡುಕೊಂಡು, ಲೋಕಕ್ಕೆ ರಕ್ಷಣೆಯನ್ನು ಹೊದಗಿಸುವ ಒಂದು ಅವಕಾಶ ನೀಡುವ ಸಮಯವು ಸಮೀಪವಾಯಿತು, ಅದರಲ್ಲಿ ಯಜ್ಞದ ಅಗತ್ಯವು ಸಹ ಇತ್ತು ಈ ಕುರಿತು ದೇವದೂತರು ಆಶ್ಚರ್ಯಪಡುತ್ತಿದ್ದರೆ, ಲೋಕವು ಇದನ್ನು ಅರಿಯದಾಯಿತು. ಯೇಸು ನೀಡುವ ಈ ನಿತ್ಯವಾದ ಜೀವಿತವನ್ನು ಅಸಡ್ಡೆ ಮಾಡುವವರು, ದೇವರು ಮನುಷ್ಯರಿಗೆ ನೀಡಿರುವ ಮಹತ್ವವಾದ ಬಹುಮಾನವನ್ನು ನಿರಾಕರಿಸುವವನಾಗಿದ್ದಾನೆ. "ಸ್ವಲ್ಪಕಾಲವು" ಮುಗಿದು ಹೋಯಿತು, ರಕ್ಷಣಾ ದಿನವು ಹತ್ತಿರವಾಗಿದೆ. ಅದರ ಬೆಲೆಯನ್ನು ನಾವುಗಳು ಕಳಕೊಳ್ಳದೆ ಇರೋಣ.

## ಎಡಬಿಡದ ಸ್ನೇಹ

*ಸ್ವಲ್ಪ ಕಾಲ ನೀವು ಎಡಬಿಡದ ಸ್ನೇಹವನ್ನು ಹೊಂದಿರುವಿರಿ.* "ಆನಂತರ ಸ್ವಲ್ಪಕಾಲವಾದ ನಂತರ ನನ್ನನ್ನು ನೋಡುವಿರಿ" (16:16ಬಿ). ಸುವಾರ್ತೆಯನ್ನು ಜನಾಂಗಗಳಿಗೆ ಪ್ರಸಿದ್ಧಿ ಪಡಿಸುವ ಅಪೊಸ್ತಲರ, ಸಂಗಡವಿದ್ದ ಸಂಬಂಧದ ಕುರಿತು ಯೇಸು ಮಾತನಾಡಿದನು (ಮತ್ತಾಯ 28:20). ಯೇಸು ಪರಲೋಕಕ್ಕೆ ಆರೋಹಣ ವಾದ ನಂತರವೂ ಆತನ ಸಾನಿಧ್ಯವು ಅವರ ಸಂಗಡ ಆತ್ಮೀಕವಾಗಿ ಇರುವದಿತ್ತು. ಆತ್ಮವು ಅವರನ್ನು ಸಕಲ ಸತ್ಯಕ್ಕೆ ನಡೆಸಿ, ಅವರಿಂದ ಪ್ರಸಂಗವನ್ನು ಬರವಣಿಗೆಯನ್ನು ಸೇವೆಯನ್ನು ಮಾಡಿಸುತ್ತಿದ್ದನು. ಆತನ ಮಾರ್ಗದರ್ಶನದ ಮುಖಾಂತರ, ಅವರು ಯೇಸುವಿನ ಪ್ರಸನ್ನತೆಯನ್ನು ಹೊಂದಿ, ಯೇಸು ಅವರೊಂದಿಗೆ ಇರುವನು ಎಂಬ ಖಾತರಿಯಿಂದ ಆತನ ಚಿತ್ತವನ್ನು ನಡೆಸುತ್ತಿದ್ದರು.

ಆತ್ಮನ ನಾಯಕತ್ವಕ್ಕೆ ಒಳಗಾದವನು ಮಾತ್ರ, ಯೇಸುವಿನ ಸಾನಿಧ್ಯವನ್ನು ಹೊಂದಲು ಸಾಧ್ಯವಿತ್ತು. ಆತ್ಮನು ನಮ್ಮೊಂದಿಗಿದ್ದು ಯೇಸುವನ್ನು ಮಹಿಮೆಪಡಿಸುವನು, ಮತ್ತು ಆತನು ಸಭೆಗೆ ಪ್ರಭುವಾಗಿದ್ದನು. ಯೇಸುವಿನ ಸಾನಿಧ್ಯವನ್ನು ಅರಿಯದವನು ಒಂದು ದೊಡ್ಡ ಅನ್ಯೋನ್ಯತೆಯನ್ನು ಕಳಕೊಂಡವನಾಗಿರುವನು.

## ನಿತ್ಯವಾದ ಆನಂದ

*"ಸ್ವಲ್ಪಕಾಲದಲ್ಲಿಯೇ ನೀವು ನಿತ್ಯವಾದ ಆನಂದವನ್ನು ಹೊಂದುವಿರಿ ಎಂದು ಆತನು ಹೇಳುತ್ತಿದ್ದನು."* ಆದ್ದರಿಂದ ಯೇಸು,

> ನೀವು ನಿಮ್ಮನಿಮ್ಮೊಳಗೆ ವಿಚಾರಿಸಿಕೊಳ್ಳುತ್ತಿರಾ? ನಿಮಗೆ ನಿಜನಿಜವಾಗಿ ಹೇಳುತ್ತೇನೆ,
> ನೀವು ಅಳುತ್ತಾ ಗೋಳಾಡುತ್ತಾ ಇರುವಿರಿ, ಆದರೆ ಲೋಕವು ಸಂತೋಷಿಸುವದು;

> ನಿಮಗೆ ದುಃಖವಾಗುವದು, ಆದರೆ ನಿಮ್ಮ ದುಃಖವು ಹೋಗಿ ಆನಂದ ಬರುವದು. ಒಬ್ಬ ಸ್ತ್ರೀ ಹೆರುವಾಗ ತನ್ನ ಬೇನೆಯ ಕಾಲ ಬಂತೆಂದು ಆಕೆಗೆ ದುಃಖವಾಗುತ್ತದೆ; ಆದರೆ ಕೂಸನ್ನು ಹೆತ್ತ ಮೇಲೆ ಲೋಕದಲ್ಲಿ ಒಬ್ಬ ಮನುಷ್ಯನು ಹುಟ್ಟಿದನೆಂಬ ಆನಂದದಿಂದ ಆ ಬೇನೆಯನ್ನು ನೆನಸುವದಿಲ್ಲ. ಹಾಗೆಯೇ ನಿಮಗೂ ಈಗ ದುಃಖವಿದ್ದರೂ ನಾನು ನಿಮ್ಮನ್ನು ತಿರಿಗಿ ನೋಡುವೆನು, ಆಗ ನಿಮ್ಮ ಹೃದಯಕ್ಕೆ ಆನಂದವಾಗುವದು (16:20-22).

ಮುಂದಿನ ಕೆಲವಾರು ದಿವಸಗಳಲ್ಲಿ, ಅಪೊಸ್ತಲರು ದುಃಖ ಪಡುವಾಗ, ಲೋಕವು ಯೇಸುವಿನ ಉಪದೇಶಕ್ಕೆ ಅಂತ್ಯವನ್ನು ನೀಡಿದೆವೆಂದು ಹೇಳಿಕೊಳ್ಳುವವರಿದ್ದರು. ಹೇಗೂ ಸಮಯವು ಸಾಗುವಾಗ, ಅವರ ದುಃಖಕ್ಕೆ ಕಾರಣ ಸಂತೋಷವೇ ಎಂದು ಅರಿಯುವವರಿದ್ದರು. ಯೇಸುವಿನ ಮರಣದ ನಿಮಿತ್ತ ಲೋಕವು ತಾತ್ಕಾಲಿಕವಾಗಿ ಆನಂದಪಟ್ಟರೂ, ಅಪೊಸ್ತಲರಿಗೆ ನಿತ್ಯವಾದ ಸಂತೋಷದ ಅವಕಾಶವನ್ನು ಮಾಡಿಕೊಟ್ಟಿತ್ತು. ಇದನ್ನು ಯೇಸು ಪ್ರಸವವೇದನೆ ಪಡುವ ಸ್ತ್ರೀಗೆ ಹೋಲಿಸಿರುವನು. ಆಕೆಯಲ್ಲಿ ಭಯಂಕರವಾದ ವೇದನೆ ಉಂಟಾದರೂ, ಕಡೆಯಲ್ಲಿ ಮಗವನ್ನು ತನ್ನ ಕೈಗಳಲ್ಲಿಟ್ಟು, ತಾಯಿಯಾಗುವಳಲ್ಲವೇ. ಆ ಮಗುವಿನ ನಿಮಿತ್ತ ಆ ತಾಯಿಗೆ ನಿರಂತರವಾದ ಆನಂದವಾಗುತ್ತದೆ.

ಕ್ರೈಸ್ತತ್ವವು ಪೂರ್ಣವಾಗಿ ಸ್ಥಾಪನೆಗೊಂಡಾಗ ಅಪೊಸ್ತಲರು (ಸಕಲ ಕ್ರೈಸ್ತರು) ಅವರ ರಕ್ಷಣೆಯಲ್ಲಿ ನಿರಂತರವಾದ ಆನಂದದ ಹಾಗೂ ಯೇಸುವಿನ ನಿರಂತರವಾದ ಸ್ನೇಹದ ಅನುಭವವನ್ನು ಹೊಂದಿದರು. ಶಿಲುಬೆ, ಪುನರುತ್ಥಾನ ಹಾಗೂ ಆತನ ಆರೋಹಣಕ್ಕೆ ಕಾರಣವನ್ನು ಕಂಡುಕೊಂಡರು. ಪಾಪಕ್ಷಮೆ, ಯೇಸುವಿನ ಸಂಸರ್ಗ, ಹಾಗೂ ಪವಿತ್ರಾತ್ಮನ ಬರುವಿಕೆಯಿಂದ ಅವರ ಹೃದಯಗಳು ಪರಲೋಕದ ಆನಂದದಿಂದ ತುಂಬಲ್ಪಟ್ಟವು.

ಸತ್ಯಾಂಶವು ನಂತರ ಆನಂದವು ಉಂಟಾಗುತ್ತದೆ. ನಾವು ನೇರವಾಗಿ ಆನಂದವನ್ನು ಸಂಧಿಸದೆ, ಯೇಸುವನ್ನು ಸಂಧಿಸಿದಾಗ, ಆತನು ನಮ್ಮ ಹೃದಯವನ್ನು ಸೇರಿ ಆನಂದವನ್ನು ಉಂಟುಮಾಡುತ್ತಾನೆ. ಯೇಸು ತರುವಂತ ಪರಲೋಕದ ಆನಂದಕ್ಕೆ ಬೇರೆಯಾವ ಆನಂದವೂ ಸರಿಸಾಟಿಯಾಗಲಾರದು. ದೇವರು ನೀಡುವ ಕ್ಷಮೆಯಿಂದ ಹಾಗೂ ಯೇಸುವಿನ ಪ್ರಸನ್ನತೆಯಿಂದ ಅದು ಉಂಟಾಗುತ್ತದೆ, ಅದು ವಿಶೇಷವಾದ ಗುಣವನ್ನು ಹೊಂದಿರುತ್ತದೆ.

## ಮುಕ್ತಾಯ

"ಸ್ವಲ್ಪಕಾಲ" ಎಂದು ಯೇಸು ಮೂರು ಸಾರಿ ಈ ಭಾಗದಲ್ಲಿ ತಿಳಿಸಿರುವನು. ಈಗ ಆತನ ವಾಗ್ದಾನದ ಆತ್ಮನು ಅದನ್ನುನೆರವೇರಿಸಿದನು. ನಡೆದು ಹೋದ ಘಟನೆಗಳನ್ನು ನೆನಸುವಾಗ, ಯೇಸು ಹೇಳಿದ್ದ ಮಾತುಗಳು ನೆನಪಿಗೆ ಬರತ್ತವೆ - ಆತನ ಮರಣ, ಬರಲಿಕ್ಕಿದ್ದ ಕ್ರೈಸ್ತರ ಯುಗ, ಆತನನ್ನು ಪ್ರೀತಿಸುವವರು ಭರವಸದಿಂದಿರುವವರಲ್ಲಿ ನೆರವೇರುವ ಆನಂದವನ್ನು ಕಾಣುತ್ತೇವೆ. ಮುಂದೇನಾಗುತ್ತದೆ? ಎಂದು ನಾವುಗಳು ಹೇಳುವದೇ ಇಲ್ಲ. ಅದರ ಬದಲಾಗಿ ಜರುಗಿರುವ ಕಾರ್ಯಗಳಿಗಾಗಿ ಆನಂದಿಸಿ, ಕ್ರಿಸ್ತನ ಹೊಸದಾದ, ಜೀವವುಳ್ಳ ದಾರಿಯಲ್ಲಿ ಸಾಗುತ್ತೇವೆ!

---

*"ಅವರು ಅವನ ಮಾತಿಗೆ ಒಪ್ಪಿ ಅಪೊಸ್ತಲರನ್ನು ಕರೆಸಿ ಹೊಡಿಸಿ ಯೇಸುವಿನ ಹೆಸರನ್ನು ಹೇಳಿ ಮತಾಡಬಾರದೆಂದು ಅಪ್ಪಣೆಕೊಟ್ಟು ಅವರನ್ನು ಬಿಟ್ಟು ಬಿಟ್ಟರು. ಅಪೊಸ್ತಲರು ತಾವು ಆ ಹೆಸರಿನ ನಿಮಿತ್ತವಾಗಿ ಅವಮಾನಪಡುವದಕ್ಕೆ ಯೋಗ್ಯರೆನಿಸಿಕೊಂಡೆವೆಂದು ಸಂತೋಷಿಸುತ್ತಾ ಹಿರೀಸಭೆಯ ಎದುರಿನಿಂದ ಹೊರಟುಹೋಗಿ ಪ್ರತಿದಿನ ಎಡೆಬಿಡದೆ ದೇವಾಲಯದಲ್ಲಿಯೂ ಮನೆಮನೆಯಲ್ಲಿಯೂ ಉಪದೇಶಮಾಡುತ್ತಾ ಕ್ರಿಸ್ತನಾದ ಯೇಸುವಿನ*

*ವಿಷಯವಾದ ಶುಭವರ್ತಮಾನವನ್ನು ಸಾರುತ್ತಾ ಇದ್ದರು" (ಅಪೊಸ್ತಲರ ಕೃತ್ಯಗಳು 5:40-42).*